ಕೊಟ್ಟು ತಾನು ವ್ಯಾಪಾರಕ್ಕಾಗಿ ಹೊರಗೆ ಹೋದನು. ರುದ್ರದತ್ತನು ಖಲಸ್ವಭಾವಿ. ಶ್ರೇಷ್ಠಿಯು ಕೊಟ್ಟಿದ್ದ ಹಣವನ್ನೆಲ್ಲ ದ್ಯೂತ ವೇಶ್ಯಾವ್ಯಸನಗಳಿಂದ ಕಳೆದುಬಿಟ್ಟನು. ಆ ಮೇಲೆ ಕಳ್ಳತನಕ್ಕೆ ತೊಡಗಿದನು. ಕಳ್ಳತನದ ಅಪರಾಧದಲ್ಲಿ ಹಿಡಿಯಲ್ಪಟ್ಟು ಬಿಡುಗಡೆಯಾದಾಗ ಉಲ್ಕಾಮುಖವೆಂಬ ವನದಲ್ಲಿ ಹೋಗಿ ಇರುತ್ತಿದ್ದನು. ಅಲ್ಲಿ ಆತನು ವ್ಯಾಧರೊಡನೆ ಸೇರಿಕೊಂಡು ಜನರನ್ನು ಸುಲಿಗೆ ಮಾಡತೊಡಗಿದನು. ಲೋಕದ ಜನರ ಪಾಲಿಗೆ ವ್ಯಾಧಿಸ್ವರೂಪನಾದನು. ಕೊನೆಗೆ ಶ್ರೇಣಿಕನೆಂಬ ಸೇನಾಪತಿಯ ಕೈಯಿಂದ ಕೊಲೆಯಾಗಿ ರೌರವನರಕಕ್ಕೆ ಹೋದನು. ದೇವಸ್ವವನ್ನು ಹಾಳುಮಾಡಿದ್ದರಿಂದ ೩೩ ಸಾಗರ ಕಾಲ ನರಕದಲ್ಲಿ ಮಹಾದುಃಖವನ್ನು ಅನುಭವಿಸುತ್ತ ಅಲ್ಲಿಂದ ಬಂದ ಮೇಲೆ ಭವಗಳಲ್ಲಿ ತೊಳಲಾಡುತ್ತಿದ್ದನು. ಕೊನೆಗೆ ಪಾಪಕರ್ಮೋಪಶಮದಿಂದಾಗಿ ಗಜಪುರ (ಹಸ್ತಿನಪುರ) ದಲ್ಲಿ ಕಾಪಿಷ್ಠಲಾಯನನೆಂಬ ಬ್ರಾಹ್ಮಣನಿಗೆ ಅನುಮತಿಯೆಂಬ ಆತನ ಪತ್ನಿಯಲ್ಲಿ ನಿಃಶ್ರೀಗೌತಮನೆಂಬ ಬ್ರಾಹ್ಮಣಪುತ್ರನಾಗಿ ಹುಟ್ಟಿದನು. ಇವನು ಹುಟ್ಟುತ್ತಲೆ ತಾಯಿತಂದೆ ಸತ್ತರು. ತಾನು ಭಿಕ್ಷೆಯೆತ್ತಿಕೊಂಡು ಅಲ್ಲಲ್ಲಿ ಸುತ್ತುತ್ತ ಅಲೆಯುತ್ತ ಇರುತ್ತಿದ್ದನು. ಒಮ್ಮೆ ಈತನು ಸಮುದ್ರದತ್ತನೆಂಬ ಮುನಿಗೆ ಆಹಾರ ನೀಡುತ್ತಿದ್ದುದನ್ನು ಕಂಡನು. ಆ ಮುನಿ ಭುಕ್ತಿಯ ಬಳಿಕ, ಆ ಮುನಿಯನ್ನು ಹಿಂಬಾಲಿಸಿ ಹೋಗಿ ಆತನ ಆಶ್ರಮವನ್ನು ತಲುಪಿದನು. ಅಲ್ಲಿ ಆತನೊಂದಿಗೆ "ಬುಭುಕ್ಷಿತನಾದ ನನ್ನನ್ನು ನಿಮ್ಮಂತೆಯೇ ಮಾಡಿ" ಎಂದು ಬೇಡಿದನು. ಆ ಗುರುವು ಈತನು ಭವ್ಯನೆಂಬುದನ್ನು ತಿಳಿದು ದೀಕ್ಷೆಯಿತ್ತನು. ದೀಕ್ಷೆಗೊಂಡು ನಿಃಶ್ರೀಗೌತಮನು ಒಂದು ಸಾವಿರ ವರ್ಷಕಾಲ ಕಠಿನತಪಸ್ಯೆಯಿಂದ ಪಾಪೋಪಶಮನಮಾಡಿಕೊಂಡನು. ಇದರಿಂದ ಸಶ್ರೀಗೌತಮ ಸಂಜ್ಞನಾಗಿ, ಅಕ್ಷೀಣ ಮಹಾನಸ ಮೊದಲಾದ ಋದ್ಧಿಗಳಿಂದ ಸಂಪನ್ನನಾದನು. ಗುರು ಸಮುದ್ರದತ್ತನು ಆರಾಧನಾವಿಧಿಯಿಂದ ನಡೆದು ೬ನೆಯ ಗ್ರೈವೇಯಕದ ಸುವಿಶಾಲವೆಂಬ ವಿಮಾನದಲ್ಲಿ ದೇವನಾದನು. ಶಿಷ್ಯನು ೫೦ ಸಹಸ್ರವರ್ಷ ತಪವಾಚರಿಸಿ, ಕೊನೆಗೆ ೨೮ ಸಾಗರೋಪಮ ಆಯುವೊಡೆಯನಾಗಿ ಅದೇ ಸುವಿಶಾಲ ವಿಮಾನದಲ್ಲಿ ಹುಟ್ಟಿದನು. ಅಹಮಿಂದ್ರಸುಖವನ್ನು ಭೋಗಿಸಿ ಬಂದ ಆ ಗೌತಮಚರ ದೇವನೇ ಈಗ ಅಂಧಕವೃಷ್ಣಿಯಾದ ನೀನು. ನಿನ್ನ ಗುರು ಸಮುದ್ರದತ್ತಚರದೇವನೇ ಸುಪ್ರತಿಷ್ಠನಾದ ನಾನು."

ಅನಂತರ ಖಿನ್ನನಾದ ಅಂಧಕವೃಷ್ಣಿ ತನ್ನ ಹತ್ತು ಮಂದಿ ಪುತ್ರರ ಪೂರ್ವಭವಗಳನ್ನು ಅವರಲ್ಲಿ ಪ್ರಶ್ನಿಸಿದನು. ಅವರು ಹೀಗೆ ಹೇಳತೊಡಗಿದರು: "ಹಿಂದೊಮ್ಮೆ ಸದ್ಭದ್ರಿಲಪುರದಲ್ಲಿ ಮೇಘರಥನೆಂಬ ಅರಸು ಆಳುತ್ತಿದ್ದನು. ಆತನ ಪತ್ನಿ ಸುಭದ್ರೆ. ಇವರಿಗೆ ದೃಢರಥನೆಂಬವನು ಮಗ. ಅದೇ ನಗರದಲ್ಲಿ ರಾಜಸಮನಾದ ಧನದತ್ತನೆಂಬ ವೈಶ್ಯನಿದ್ದನು. ಈತನ ಪತ್ನಿ ನಂದಯಶೆ. ಇವರಿಗೆ ಸುದರ್ಶನೆ ಮತ್ತು ಸುಜ್ಯೇಷ್ಠೆ ಎಂಬ ಇಬ್ಬರು ಪುತ್ರಿಯರೂ, ಧನಪಾಲ ಜಿನಪಾಲ ದೇವಪಾಲ ಅರ್ಹದ್ದಾಸ ಜಿನದಾಸ ಅರ್ಹದ್ದತ್ತ ಜಿನದತ್ತ ಪ್ರಿಯಮಿತ್ರ ಧರ್ಮರುಚಿ ಎಂಬ ಒಂಬತ್ತು ಮಂದಿ ಪುತ್ರರೂ ಇದ್ದರು. ಹೀಗಿರಲು ದೊರೆ ಮೇಘರಥನು ಸುಮಂದರ ಗುರುವಿನ ಪಕ್ಕದಲ್ಲಿ ದೀಕ್ಷಿತ



ನಾದನು. ಆಗ ಧನದತ್ತನೂ ತನ್ನ ಒಂಬತ್ತು ಮಂದಿ ಪುತ್ರರೊಡಗೂಡಿ ದೀಕ್ಷಿತನಾದನು. ಹಾಗೆಯೇ ಸುದರ್ಶನೆಯೆಂಬ ಆರ್ಯಿಕೆಯ ಪಾರ್ಶ್ವದಲ್ಲಿ ಮೇಘರಥನ ಪತ್ನಿ ಸುಭದ್ರೆಯೂ, ಧನದತ್ತಪುತ್ರಿಯರಾದ ಸುದರ್ಶನೆ ಸುಜ್ಯೇಷ್ಠೆಯರೊಡಗೂಡಿ ತಪೋದೀಕ್ಷೆಗೊಂಡಳು. ಹೀಗಿರುತ್ತಿರಲು ಧನದತ್ತ ಸುಮಂದರಗುರು ಮೇಘರಥ ಈ ಮೂವರು ಮುನಿಗಳೂ ವಾರಣಾಸಿಗೆ ಬಂದರು. ಅಲ್ಲಿ ಅವರಿಗೆ ಕೇವಲಜ್ಞಾನವುಂಟಾಗಿ ಲೋಕದಲ್ಲಿ ವಿಹಾರಾರ್ಥವಾಗಿ ಹೊರಟರು. ಈ ಮೂವರೂ ಅನುಕ್ರಮವಾಗಿ ಏಳು ಐದು ಹನ್ನೆರಡು ವರ್ಷಗಳವರೆಗೆ ಲೋಕದಲ್ಲಿ ವಿಹಾರಿಸುತ್ತ, ಕೊನೆಗೆ ರಾಜಗೃಹನಗರಕ್ಕೆ ಬಂದು ಅಲ್ಲಿ ಮೋಕ್ಷಕ್ಕೆ ಸಂದರು. ನಂದಯಶೆ, ಗರ್ಭವತಿಯಾಗಿದ್ದುದರಿಂದಾಗಿ, ಈ ಮೊದಲೇ ಎಲ್ಲರೊಂದಿಗೆ ದೀಕ್ಷೆಗೊಂಡಿರಲಿಲ್ಲ. ಆಕೆಗೆ ಧನಮಿತ್ರನೆಂಬ ಹೆಸರಿನ ಮಗನಾಗಿ ಅವನು ಯಥಾಯೋಗ್ಯನಾಗುತ್ತಲೂ ಅವನನ್ನು ಬಿಟ್ಟು ಈಗ ತಾನೂ ತಪಸ್ಸಿನಲ್ಲಿ ತೊಡಗಿದಳು.ಒಂದು ದಿನ ಧನದತ್ತನ ಪುತ್ರರು ಸಿದ್ಧಶಿಲಾರೂಢರಾಗಿ ಪ್ರಾಯೋಪಗಮಗೊಂಡಿರುವಾಗ ನಂದಯಶಾರ್ಯಿಕೆಯು ಅವರನ್ನು ಕಂಡು ವಂದಿಸಿ ಸ್ನೇಹಮೋಹಿತೆಯಾಗಿ ಮತ್ತೆ ಅವರಿಗೆ ತಾಯಾಗಿ ಹುಟ್ಟಬೇಕೆಂದು ನಿದಾನಮಾಡಿದಳು. ಹಾಗೆಯೇ ಆ ಮುನಿಪರ ಸೋದರಿಯರಾದ ಸುದರ್ಶನಾರ್ಯಿಕೆ ಸುಜ್ಯೇಷ್ಠಾರ್ಯಿಕೆಯರೂ ಸ್ನೇಹಮೋಹಿತೆಯರಾಗಿ ಮತ್ತೆ ಅವರೇ ತಮಗೆ ಸೋದರರಾಗಬೇಕೆಂದು ನಿದಾನಮಾಡಿದರು. ಕೊನೆಗೆ ಆ ಪುತ್ರರೂ ಆ ಮಾತಾಸುತೆಯರೂ ಆರಾಧನೆಯನ್ನಾಚರಿಸಿ ಸಮಾಧಿವಿಧಿಯಿಂದ ತೀರಿಕೊಂಡು ಎಲ್ಲರೂ ಅಚ್ಯುತಕಲ್ಪದಲ್ಲಿ ದೇವರಾಗಿ ಹುಟ್ಟಿದರು. ಅಲ್ಲಿ ೨೨ ಸಾಗರೋಪಮಕಾಲ ಸುಖಾನುಭವಮಾಡಿ ಅಲ್ಲಿಂದ ಪರಿಚ್ಯುತರಾಗಿ ಬಂದು ಭೂಮಿಯಲ್ಲಿ ಅವರೇ ನಿನ್ನ (ಅಂಧಕವೃಷ್ಣಿ) ಪತ್ನಿ (ಸುಭದ್ರೆ), ಪುತ್ರಿಯರು (ಕುಂತಿ, ಮದ್ರಿ) ಪುತ್ರರು (ವಸುದೇವ ಹೊರತಾಗಿ ೯ ಮಂದಿ ಪುತ್ರರು) ಆಗಿ ಹುಟ್ಟಿದ್ದಾರೆ."

ಅನಂತರ ಸುಪ್ರತಿಷ್ಠ ಕೇವಲಿ ಆ ದೇವಮಾನವರ ಸಭೆಯಲ್ಲಿ ಶ್ರೋತೃಸಮಕ್ಷದಲ್ಲಿ ವಸುದೇವನ ಭವಾಂತರಗಳನ್ನು ನಿರೂಪಿಸಿದನು: "ಮಗಧ ದೇಶದ ಶಾಲಿಗ್ರಾಮದಲ್ಲಿ ಒಬ್ಬ ದರಿದ್ರ ಬ್ರಾಹ್ಮಣನಿಗೆ ಒಬ್ಬ ಮಗನಾದನು. ಅವನಿಂದ ಯಾರಿಗೂ ಸುಖವೇನೂ ಇರಲಿಲ್ಲ. ಶಿಶುವು ಗರ್ಭಸ್ಥವಿದ್ದಾಗಲೇ ತಂದೆ ತೀರಿಕೊಂಡನು; ಹುಟ್ಟುತ್ತಲೇ ತಾಯಿ ತೀರಿಕೊಂಡಳು. ಆಮೇಲೆ ತಾಯಿಯ ಒಡಹುಟ್ಟಿದವಳು ಅದರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಳು. ಆದರೆ ಅವಳು ಮಗುವಿಗೆ ಸುಮಾರು ೮ ವರ್ಷವಾದಾಗ ಶೋಕಕಾರಣವಾಗಿ ತೀರಿಹೋದಳು. ಈಗ ಆ ಬಾಲಕ ರಾಜಗೃಹನಗರದಲ್ಲಿ ತನ್ನ ಸೋದರ ಮಾವನ ಮನೆಯಲ್ಲಿರತೊಡಗಿದನು. ಅಲ್ಲಿ 'ಇವನಾದರೊ ನನ್ನ ಗಂಡನ ಸೋದರಳಿಯ' ಎಂದು ವಿಚಾರಮಾಡಿ ಇವನ ಪೋಷಣೆಯನ್ನು ಸೋದರತ್ತೆ ನೋಡಿಕೊಳ್ಳುತ್ತಿದ್ದಳು. ಇವನ ಶರೀರ ಮಲಗ್ರಸ್ತವೂ ಆಡಿನಮರಿಯ ಹಾಗೆ ಕಟುವಾಸನೆಯಿಂದ ಕೂಡಿದುದೂ ಆಗಿತ್ತು. ಕೂದಲು ವಿಕೀರ್ಣಶೀರ್ಣವಾಗಿತ್ತು. ಬಟ್ಟೆಬರೆಗಳು ಮಾಸಿ ಮೈಲಿಗೆಯಾಗಿತ್ತು. ಕಣ್ಣುಗಳು ಸಹಜವಾಗಿಯೇ ಪಿಂಗಲವರ್ಣದವಾಗಿದ್ದವು. ಹೀಗಿದ್ದೂ ಅವನು ತನ್ನ ಸೋದರ